O.S. NO. 270/2023

PW -1 .

Dated 13-10-2025

ಸಾಕ್ಷಿಯನ್ನು ಈ ದಿನ ದಿನಾಂಕ 13-10-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಪಿ ಬಿ ಎಚ್ ವಕೀಲರಿಂದಃ

ನನ್ನ ತಂದೆ ಒಕ್ಕುಲುತನ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಶಾರೀರಿಕವಾಗಿ ಸದೃಡವಾಗಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ನನ್ನ ತಂದೆಯವರಿಗೆ ಮಾತ್ರ ಸಲ್ಲಿಸಲು ಅಧಿಕಾರ ಇದ್ದು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಅವರ ಜೀವಿತ ಅವದಿಯಲ್ಲಿ ನನಗೆ ದಾವೆ ಸಲ್ಲಿಸಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನೀಲಪ್ಪನ ಮಗ ಎಂದು ತೊರಿಸಲು ದಾಖಲೆ ಹಾಜರು ಮಾಡುತ್ತಿರಾ ಎಂದರೆ ಮಾಡುತ್ತೇನೆ. ನನ್ನ ಶಾಲಾ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನಾನು ಹೇಳುತ್ತಿರುವಂತೆ ನಾನು 4 ನೇ ಪ್ರತಿವಾದಿನ ಮಗ ಎಂದು ತೊರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು 4 ನೇ ಪ್ರತಿವಾದಿಗೆ ಯಾವುದೇ ರೀತಿ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಮರಡಿನಾಗಲಾಪುರ ಊರಿಗೆ ಮತ್ತು ನನಗೆ ಯಾವುದೇ ರೀತಿ ಸಂಬದ ಇರುವುದಿಲ್ಲ ಎಂರದೆ ಸರಿಯಲ್ಲ. ನಾನು ಮರಡಿನಾಗಲಾಪುರದಲ್ಲಿ ವಾಸವಿದ್ದೇನೆ ಎನ್ನುವುದಕ್ಕೆ ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಮುಂದೆ ಹಾಜರು ಮಾಡುತ್ತೇನೆ. 4 ನೇ ಪ್ರತಿವಾದಿಗೆ ಮದ್ಯಪಾನ ಚಟ ಇದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾವು 4 ನೇ ಪ್ರತಿವಾದಿ ಕುಟುಂಬಕ್ಕೆ

ಯಾವುದೇ ಸಂಬಂದ ಇಲ್ಲದೇ ಇರುವುದರಿಂದ ಅವರು ಯಾವುದೇ ಕೇಸು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಪ್ರಸ್ತುತ ದಾವೆಯನ್ನು ಖೊಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೂಲ ಪುರುಷ ನಿಂಗಪ್ಪ ರವರಿಗೆ 3 ಜನ ಮಕ್ಕಳು ಇರುವುದರಿಂದ ಅವರು ಆಸ್ತಿ ಆರ್ ಎಸ್ ನಂ. 149/3 ನೇದ್ದನ್ನು ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ರಿ.ಸ. ನಂ. 60/13 ಕ್ಷೇತ್ರ 1 ಎಕರೆ 9 ಸಹ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಿ.ಸ. ನಂ. 150/3 ನೇದ್ದನ್ನು ಸಹ ಮೂಲ ಪುರಷ ನಿಂಗಪ್ಪ ಮೃತ್ಯು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಮೂಲ ಪುರಷ ನಿಂಗಪ್ಪ ರವರಿಗೆ ನಾವು ಯಾವುದೇ ರೀತಿ ವಾರಸಾದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಮರಡಿನಾಗಲಾಪುರ ಗ್ರಾಮದ ಪ್ರತಿವಾದಿಗಳಿಗೆ ಆಗದವರ ಪ್ರಚೊದನೆ ಮೆರೆಗೆ ಇದೊಂದು ಖೊಟ್ಟಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ 1 ರಿಂದ 3 ನೇ ಪ್ರತಿವಾದಿಗಳು ಮಾತ್ರ ದಾವಾ ಆಸ್ತಿಗಳು ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸಹ ಮಾಡುತ್ತಿದ್ದಾರೆ ಎಂದು ಸಾಕಿ ಪುನಃ ನುಡಿದಿರುತ್ತಾರೆ. ಈ ಕುರಿತು ಯಾವುದಾದರೂ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಗಳಿಗೆ ಮತ್ತು ನಮಗೆ ಯಾವುದೇ ರೀತಿ ಸಂಬ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ನನ್ನ ಕಾಕಂದಿರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

O.S. NO. 270/2023

PW -1 .

Dated 13-10-2025

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.